**ಭದ್ರಾವತಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ.**

**ಸಿ.ಸಿ.ಸಂಖ್ಯೆ: 2116/2024**

ಫಿರ್ಯಾದಿಃ ಹೊಳೆ ಹೊನ್ನೂರು ಪೊಲೀಸ್ ಠಾಣೆ, ಭದ್ರಾವತಿ.

**– ವಿರುದ್ಧ –**

ಆರೋಪಿತರುಃ 1. ಸಾಯಿನಾಥ ಬಿನ್ ಮಂಜಪ್ಪ, 28 ವರ್ಷ,
2. ಯೋಗರಾಜ ಬಿನ್ ಮಂಜಪ್ಪ, 32 ವರ್ಷ,
3. ಲಕ್ಷ್ಮಮ್ಮ ಕೋಂ ಮಂಜಪ್ಪ, 50 ವರ್ಷ,

ಆರೋಪಿತರ ವಾಸಃ ಸಿದ್ದರ ಕಾಲೋನಿ, ಭದ್ರಾವತಿ ತಾಲ್ಲೂಕು.

**ದೋಷಾರೋಪಣೆ**

ನಾನು ರವಿ ಕುಮಾರ ವಿ. ಬಿ.ಎ.ಎಲ್., ಎಲ್.ಎಲ್.ಬಿ. C/c ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳು, ಭದ್ರಾವತಿ ಆದ ನಾನು, ಈ ಮೂಲಕ ಮೇಲೆ ಹೆಸರಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ, ದಿನಾಂಕ 22-01-2023 ರಂದು ಬೆಳಗ್ಗೆ 08.30 ರ ಸಮಯದಲ್ಲಿ, ಭದ್ರಾವತಿ ತಾಲ್ಲೂಕು, ಹೊಳೆಹೊನ್ನೂರು ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಸಿದ್ದರ ಕಾಲೋನಿ ಗ್ರಾಮದ ಚಾಸಾ-1 ದೇವಮ್ಮ ರವರ ಮನೆಯ ಮುಂಭಾಗದ ಸಿಮೆಂಟ್ ರಸ್ತೆಯಲ್ಲಿ, ಚಾಸಾ-4 ಚೇತನ ರವರು ಸ್ನಾನ ಮಾಡುತ್ತಿದ್ದಾಗ 1 ನೇ ಆರೋಪಿಯಾದ ನೀವು ಕಿಟಕಿಯಲ್ಲಿ ಇಣುಕಿ ನೋಡಿದ್ದನ್ನು ಚಾಸಾ-1 ದೇವಮ್ಮ ರವರು 1 ನೇ ಆರೋಪಿಯಾದ ನಿಮಗೆ ಪ್ರಶ್ನಿಸಿದ್ದ ವಿಚಾರಕ್ಕೆ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿ ಜಗಳ ಬಿಡಿಸಲು ಬಂದ ಚಾಸಾ-2 ಭಾಗ್ಯರಾಜ್ ರವರಿಗೆ 1 ನೇ ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈದು

ಚಾಸಾ–2 ಭಾಗ್ಯರಾಜ್ ರವರನ್ನು ದೂಡಿದ್ದು ನಂತರ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ದೇವಮ್ಮ ಮತ್ತು ಚಾಸಾ–2 ಭಾಗ್ಯರಾಜ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಮನಃ ಶಾಂತಿಗೆ ಭಂಗವನ್ನುಂಟು ಮಾಡಿದ್ದರಿಂದ ಭಾ.ದಂ.ಸಂ.ಕಲಂ.504 ಸಹವಾಚಕ 34 ರ ಅಡಿಯಲ್ಲಿ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಜ್ಞಾನದಲ್ಲಿ ಎಸಗಿರುತ್ತೀರಾ ಎಂದೂ,

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ, ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ದೇವಮ್ಮ ಮತ್ತು ಚಾಸಾ–2 ಭಾಗ್ಯರಾಜ್ ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಉಂಟಾಗುವಂತೆ ಮಾಡಿದ್ದರಿಂದ ಭಾ.ದಂ.ಸಂ.ಕಲಂ.323 ಸಹವಾಚಕ 34 ರ ಅಡಿಯಲ್ಲಿ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಜ್ಞಾನದಲ್ಲಿ ಎಸಗಿರುತ್ತೀರಾ ಎಂದೂ,

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ, ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ದೇವಮ್ಮ ಮತ್ತು ಚಾಸಾ–2 ಭಾಗ್ಯರಾಜ್ ರವರಿಗೆ ಜೀವ ಬೆದರಿಕೆ ಹಾಕಿದ್ದರಿಂದ ಭಾ.ದಂ.ಸಂ.ಕಲಂ.506 ಸಹವಾಚಕ 34 ರ ಅಡಿಯಲ್ಲಿ 1 ರಿಂದ 3 ರ ವರೆಗಿನ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಜ್ಞಾನದಲ್ಲಿ ಎಸಗಿರುತ್ತೀರಾ ಎಂದೂ,

ಕೊನೆಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ, ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯಾದ ನೀವು ಚಾಸಾ–4 ಚೇತನ ರವರು ಸ್ನಾನ ಮಾಡುತ್ತಿದ್ದಾಗ ಕಿಟಕಿಯಲ್ಲಿ ಇಣುಕಿ ನೋಡಿದ್ದರಿಂದ ಭಾ.ದಂ.ಸಂ.ಕಲಂ.354C ಅಡಿಯಲ್ಲಿ 1 ನೇ ಆರೋಪಿಯಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಜ್ಞಾನದಲ್ಲಿ ಎಸಗಿರುತ್ತೀರಾ ಎಂದು,

ಹಾಗೂ ನೀವೆಲ್ಲರೂ ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ 27.02.2026 C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.

ಆರೋಪಿತರ ಸಹಿಃ

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ಸಿ.ಸಿ.ನಂಃ 2116/2024

1 ನೇ ಆರೋಪಿ ಹೆಸರುಃ ಸಾಯಿನಾಥ

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೊಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು,

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರಃ ಇಲ್ಲ, ವಿಚಾರಣೆ ಆಗಬಯಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ27-02-2026

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಭದ್ರಾವತಿ.

1 ನೇ ಆರೋಪಿ ಸಹಿಃ

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ಸಿ.ಸಿ.ನಂಃ 2116/2024

2 ನೇ ಆರೋಪಿ ಹೆಸರುಃ ಯೋಗರಾಜ

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೊಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು,

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರಃ ಇಲ್ಲ, ವಿಚಾರಣೆ ಆಗಬಯಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 27-02-2026

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಭದ್ರಾವತಿ.

2 ನೇ ಆರೋಪಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಭದ್ರಾವತಿ.

ಸಿ.ಸಿ.ನಂಃ 2116/2024

3 ನೇ ಆರೋಪಿ ಹೆಸರುಃ ಲಕ್ಷ್ಮಮ್ಮ

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೋಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ ಹೌದು,

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?
ಉತ್ತರಃ ಇಲ್ಲ, ವಿಚಾರಣೆ ಆಗಬಯಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 27.02.2026

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಭದ್ರಾವತಿ.

3 ನೇ ಆರೋಪಿ ಸಹಿಃ